ಸಾಕ್ಷಿಗೆ ಪುನಃ ಕರೆಯಿಸಿ ಪ್ರಮಾಣ ವಚನ ಭೋಧಿಸಿದ
ದಿನಾಂಕಃ 16-05-2026
ಮುಂದುವರೆದ ಮುಖ್ಯ ವಿಚಾರಣೆ ಸರಕಾರಿ ಅಭಿಯೋಜಕರಿಂದ

4. ಸಾಕ್ಷಿದಾರರಿಗೆ ಈಗ ಪೆನಡ್ರೈವ ತೋರಿಸಲಾಗಿದ್ದು ನೋಡಿ ಗುರುತಿಸಿರುತ್ತಾರೆ. ಅದನ್ನು ಈಗಾಗಲೇ ಮು.ಮಾ.5 ಎಂದು ಗುರುತಿಸಲಾಯಿತು. ಈ ಹಂತದಲ್ಲಿ ನ್ಯಾಯಾಲಯದ ಸಿಸ್ಟಮನಲ್ಲಿ ಮು.ಮಾ.5 ಪೆನಡ್ರೈವ ಹಾಕಿ ಸಾಕ್ಷಿದಾರರಿಗೆ ತೋರಿಸಲಾಗಿದ್ದು ಒಟ್ಟು ಮೂರು ವಿಡಿಯೋ ತುಣುಕುಗಳು ಕಂಡು ಬರುತ್ತದೆ. 2 ನೇ ಕ್ಲಿಪನ್ನು ಪ್ಲೇ ಮಾಡಿ ನೋಡಲಾಗಿ ಆ ಕ್ಲಿಪ 131 ಎಮ್.ಬಿ. ಇದ್ದು ಅದನ್ನು ತೆರೆದು ನೋಡಲಾಗಿ ಅದರಲ್ಲಿ ದಿನಾಂಕ ಮತ್ತು ಸಮಯ ಮೇಲಗಡೆ ಭಾಗದಲ್ಲಿ ಕಂಡು ಬರುತ್ತದೆ. ಸಮಯ 19.48.04 ಎಂದು ಪ್ರಾರಂಭವಾಗಿ 19.49.04 ವರೆಗೆ ಕಂಡು ಬರುತ್ತದೆ. ಅದರಲ್ಲಿ ಆರೋಪಿ ಅಬ್ದುಲ ನಬೀ, ಮೃತ ನರೇಂದ್ರ, ಚಾಸಾ-21 ಯಲ್ಲಪ್ಪ ರವರು ಇರುವುದು ಕಂಡು ಬರುತ್ತದೆ. ಆ ಕ್ಲಿಪಿನಲ್ಲಿ ಈ ಮೂರು ಜನರು ಗೇಟಿನ ಒಳಗಡೆ ಬರುವುದು ಕಂಡು ಬರುತ್ತದೆ. ಸಾಕ್ಷಿದಾರರು ಸದರಿ ಮೂರು ಜನರನ್ನು ನೋಡಿ ಗುರುತಿಸಿರುತ್ತಾರೆ.

5. 1 ನೇ ಕ್ಲಿಪ ಅನ್ನು ನೋಡಲಾಗಿ ಸಮಯ 19.49.04 ರಿಂದ ಪ್ರಾರಂಭವಾಗಿ 19.50.04 ರವರೆಗೆ ಇದ್ದು ಇದು 131 ಎಮ್.ಬಿ ವಿಡಿಯೋ ಇದ್ದು. ಪ್ಲೇಯ ಮಾಡಿ ನೋಡಲಾಗಿ ಆರೋಪಿತನು ಒಂದು ನೀರಿನ ಬಾಟಲನ್ನು ತೆಗೆದುಕೊಂಡು ಅಂಗಡಿಯಿಂದ ಹೊರಗಡೆ ಹೋಗುವುದು ಕಂಡುಬರುತ್ತದೆ ಮತ್ತು ಅವನ ಹಿಂದೆ ಚಾಸಾ-21 ಯಲ್ಲಪ್ಪ ಹೋಗುವುದು ಕಂಡು ಬರುತ್ತದೆ. ನಂತರ ಮೃತ ನರೇಂದ್ರ ಅಂಗಡಿಯಿಂದ ಹೊರಗಡೆ ಹೋಗುವಾಗ ಗೇಟು ಹಾಕಿಕೊಂಡು ಹೋಗುವುದು ಕಂಡು ಬರುತ್ತದೆ.

6. ಈ ಕ್ಲಿಪನಲ್ಲಿ ಇರುವ ಎಲ್ಲ ದೃಶ್ಯವಳಿಗಳು ನೈಜತೆಯಿಂದ ಕೂಡಿರುತ್ತವೆ ಎಂದು ಪ್ರಮಾಣ ಪತ್ರ ಕೊಟ್ಟಿರುತ್ತೇನೆ. ಸದರಿ ಪ್ರಮಾಣ ಪತ್ರವನ್ನು ನೋಡಿ ಗುರುತಿಸಿದ್ದು ಅದನ್ನು **ನಿ.ಪಿ.59** ಎಂದು ಸಾಕ್ಷಿದಾರರ ಸಹಿಯನ್ನು **ನಿ.ಪಿ.59(ಎ)** ಎಂದು ಗುರುತಿಸಲಾಯಿತು.

7. ದಿಃ 09.10.2024 ರಂದು ನನಗೆ ಗೊತ್ತಾಗಿದ್ದು ಏನೆಂದರೆ ಚಾಸಾ-1 ಹಾಗೂ ಆರೋಪಿತನ ನಡುವೆ ಅನ್ಯೆತಿಕ ಸಂಬಂದ ಇದ್ದು ಆರೋಪಿ ಚಾಸಾ-1 ರವರಿಗೆ ಹೈದ್ರಾಬಾದಿಗೆ ಹೋಗಿ ಇರೂಣ ಎಂದು ಹೇಳಿರುತ್ತಾನೆ ಅದಕ್ಕೆ ಚಾಸಾ-1 ಇವರು ನನಗೆ ಮಗನ ವಿಧ್ಯಾಭ್ಯಾಸ ಮಾಡಿಸಬೇಕು ಇಲ್ಲೆ ಇರುತ್ತೇನೆ ಎಂದು ನಮ್ಮ ಅನ್ಯೆತಿಕ ಸಂಬಂಧಕ್ಕೆ ನರೇಂದ್ರ ಬಾಲಕ ಅಡ್ಡ ಆಗಿರುತ್ತಾನೆ ಎಂದು ಆರೋಪಿ ಸದರಿ ಬಾಲಕನನ್ನು ಕೊಲೆ ಮಾಡಿರುತ್ತಾನೆ ಎಂದು ಗೊತ್ತಾಯಿತು.

<u>ಪಾಟೀ ಸವಾಲು ಆರೋಪಿ ಪರವಾಗಿ ಶ್ರೀ. ಡಿ.ವಿ. ವಕೀಲರಿಂದ</u>

8. ನಾನು ಬಿ.ಕಾಂ ಪದವಿಧರನಾಗಿರುತ್ತೇನೆ. ಗುರುಮಠಕಲನಲ್ಲಿ ಪದವಿ ಮುಗಿಸಿರುತ್ತೇನೆ. ಪೋಟೊಗ್ರಾಪಿಯಲ್ಲಿ ತರಬೇತಿ ಆಗಿರುವುದಿಲ್ಲ. ಸಾಕ್ಷಿದಾರರು ಮುಂದುವರೆದು ಹೇಳಿದೆನೆಂದರೆ ಸಾಮಾನ್ಯವಾಗಿ ಗೊತ್ತಿರುತ್ತದೆ ಎಂದು ನುಡಿಯುತ್ತಾರೆ. ಸಿಸಿ ಕ್ಯಾಮರವನ್ನು 2023 ರಲ್ಲಿ ತೆಗೆದುಕೊಂಡು ನನ್ನ ಅಂಗಡಿಯ ಮೇಲೆ ಸಿಸಿ ಕ್ಯಾಮರ ಅಳವಡಿಸಿರುತ್ತೇನೆ. ನೀನು ಸಿಸಿಟಿವಿ ಬಗ್ಗೆ ಸಾಮಾನ್ಯ ಜ್ಞಾನ ಯಾರಿಂದ ಪಡೆದುಕೊಂಡಿದ್ದಿರಿ ಎನ್ನುವುದಕ್ಕೆ ಸಾಕ್ಷಿದಾರರು ಸಿಸಿ ಕ್ಯಾಮರ ಪಡೆದುಕೊಳ್ಳುವ ಕಾಲಕ್ಕೆ ಆ ಅಂಗಡಿಯವರೆ ನನಗೆ ತಿಳಿಸಿ ಹೇಳುತ್ತಾರೆ ಆದರೆ ಆ ವ್ಯಕ್ತಿಯ ಹೆಸರು ಗೊತ್ತಿರುವುದಿಲ್ಲ ಆದರೆ ಸಂಗೀತಾ ಎನ್ನುವ ಅಂಗಡಿಯಲ್ಲಿ ಸಿಸಿ ಕ್ಯಾಮರ ಖರೀದಿ ಮಾಡಿರುತ್ತೇನೆ ಎಂದು ನುಡಿಯುತ್ತಾರೆ. ಸಿಸಿಟಿವಿಯ ಮಾಡೇಲ್, ದಿನಾಂಕ, ವರ್ಷ ಇದನ್ನು ನನ್ನ ಪ್ರಮಾಣ ಪತ್ರದಲ್ಲಿ ಬರೆದಿರುವುದಿಲ್ಲ ಎಂದರೆ ಸರಿ. ಆ ಸಿಸಿಟಿವಿಯಲ್ಲಿ

ಮೇಲೆ ಅಂಗಡಿ ನಿಮ್ಮದೇ ಇರುತ್ತದೆ ಯಾವುದೇ ಆಧಾರಗಳು ಕಂಡು ಬರುವುದಿಲ್ಲ ಎನ್ನುವುದಕ್ಕೆ ಸಾಕ್ಷಿದಾರರು ನಮ್ಮದೇ ಮನೆ, ನಮ್ಮದೇ ಅಂಗಡಿ ಇರುತ್ತದೆ ಎಂದು ನುಡಿಯುತ್ತಾರೆ. ದೃಶ್ಯವಳಿಗಳನ್ನು ನೋಡಲಾಗಿ ಒಬ್ಬರಾದ ನಂತರ ಒಬ್ಬರು ಬಂದಿರುತ್ತಾರೆ ಎಂದರೆ ಸರಿ. ನಂತರ ಒಬ್ಬರಾದ ನಂತರ ಒಬ್ಬರು ಹೋಗಿರುತ್ತಾರೆ ಎಂದರೆ ಸರಿ. ಚಾಸಾ-21 ಯಲ್ಲಪ್ಪ ಹೋದ ನಂತರ ನರೇಂದ್ರ ಹೋಗಿರುತ್ತಾನೆ ಎಂದರೆ ಸರಿ. ಚಾಸಾ-1 ಹಾಗೂ ಆರೋಪಿತನ ನಡುವೆ ಅನೈತಿಕ ಸಂಬಂಧ ಇದ್ದ ಬಗ್ಗೆ ನನಗೆ ವೈಯಕ್ತಿಕ ಮಾಹಿತಿ ಇರುವುದಿಲ್ಲ. ನಾನು ಅಂಗಡಿ ನಡೆಸಲು ಗ್ರಾಮ ಪಂಚಾಯಿತಿಯಿಂದ ಲೈಸೆನ್ಸ ಪಡೆದುಕೊಂಡಿರುತ್ತೇನೆ ಅದನ್ನು ಪೊಲೀಸರಿಗೆ ಕೊಟ್ಟಿರುವುದಿಲ್ಲ. ಲೈಸೆನ್ಸ ನಂಬರ ಈಗ ನನಗೆ ನೆನಪಿರುವುದಿಲ್ಲ ಎಂದು ನುಡಿಯುತ್ತಾರೆ.

9. ದಿಃ 30.09.2024 ರಂದು ನಾನು ಗುರುಮಠಕಲಗೆ ಸಾಯಂಕಾಲ 5.30 ಗಂಟೆಯ ಸುಮಾರು ಹೋಗಿರುತ್ತೇನೆ. ಅದೇ ದಿನ ರಾತ್ರಿ 10.00 ಗಂಟೆಗೆ ಮರಳಿ ಕಾಕಲವಾರಕ್ಕೆ ಬಂದಿರುತ್ತೇನೆ ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಮ್ಮ ಮನೆಯ ಪಕ್ಕದಲ್ಲಿ ಚಾಸಾ-27 ರವರ ಹಳೆಯ ಮನೆಯ ಎತ್ತಿನ ಕೊಟ್ಟಿಗೆಯಲ್ಲಿ ಜನ ಸೇರಿದ್ದರು ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನರೇಂದ್ರ ಎನ್ನುವ ಬಾಲಕ ಸಾವನ್ನೊಪ್ಪಿರುತ್ತಾನೆ ಎಂದು ಜನರು ಮಾತಾನಾಡಿಕೊಳ್ಳುತ್ತಿದ್ದರು. ನಂತರ ಸ್ಥಳಕಕ್ಕೆ ಚಾಸಾ-1, 16 ಮತ್ತು ನಾನು ಹಾಗೂ ಇತರರು ಚಾಸಾ-27 ರವರ ಎತ್ತಿನ ಕೊಟ್ಟಿಗೆಯ ಹತ್ತಿರ ಹೋಗಿರುತ್ತೇವೆ. ಮೃತ ಬಾಲಕನ ಶರೀರದ ಹತ್ತಿರ ಚಪ್ಪಲಿಗಳು ಕಂಡು ಬಂದವು ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

10. ದಿಃ 02.10.2024 ರಂದು ಚಾಸಾ-45 ರವರು ಬಂದು ಸಿಸಿ ಟಿವಿ ಇಟ್ಟಿಕೊಂಡಿದಿಯಾ ಅಂತಾ ಕೇಳಿರುತ್ತಾರೆ ಅದಕ್ಕೆ ನಾನು ನನ್ನ ಅಂಗಡಿಯ ರಕ್ಷಣೆಗೆ ಇಟ್ಟುಕೊಂಡಿರುತ್ತೇನೆ ಎಂದು ಹೇಳಿರುತ್ತೇನೆ. ಆಗ ಪೊಲೀಸರು ಸಿಸಿ

ಟಿವಿ ಫೂಟೇಜ ಚೆಕ ಮಾಡಬೇಕಾಗಿದೆ ಎಂದು ನನಗೆ ಹೇಳಿರುತ್ತಾರೆ. ಅ ಸಿಸಿ ಟಿವಿಯ ನನ್ನ ಮೊಬೈಲನಲ್ಲಿ ಚೇಕ್ ಮಾಡಿರುತ್ತೇನೆ ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದಿಃ 30.9.2024 ರ ಸಂಜೆ 7.00 ಗಂಟೆಯಿಂದ ರಾತ್ರಿ 10.00 ಗಂಟೆಯವರೆಗೆ ದೃಶ್ಯಾವಳಿಗಳನ್ನು ಚೆಕ ಮಾಡಿರುತ್ತೇನೆ. ಅಲ್ಲಿ ಮೃತ ನರೇಂದ್ರ ನನ್ನ ಅಂಗಡಿಗೆ ಬಂದಿದ್ದು ಮತ್ತು ಯಾರು ಯಾರು ಬಂದಿದ್ದರು ಎಂದು ಪರೀಶಿಲಿಸಿದಾಗ ಚಾಸಾ-21, ಮೃತ ನರೇಂದ್ರ, ಆರೋಪಿತನು ಇದ್ದ ಬಗ್ಗೆ ಕಂಡು ಬಂತು. ಈ ದೃಶ್ಯಾವಳಿಗಳನ್ನು ಚಾಸಾ-45 ರವರು ಪೇನಡ್ರೈವನಲ್ಲಿ ಹಾಕಿಕೊಂಡು ಎಂದು ಸೂಚಿಸಿದ ಮೇರೆಗೆ ನಾನು ಅದನ್ನು ಪೆನಡ್ರೈವನಲ್ಲಿ ಹಾಕಿಕೊಂಡಿರುತ್ತೇನೆ ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆ ಪೆನಡ್ರೈವನ್ನು ನೋಡಿದರೆ ಗುರುತಿಸುತ್ತೇನೆ ಮತ್ತು ದೃಶ್ಯಾವಳಿಗಳನ್ನು ನೋಡಿದರೆ ಗುರುತಿಸುತ್ತೇನೆ ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಇಂತಹ ದೃಶ್ಯವಳಿಗಳನ್ನು ಯಾರದರೂ ತಯಾರು ಮಾಡಿ ಕೊಡಬಹುದು ಎಂದರೆ ಸರಿಯಲ್ಲ.

11. ಪ್ರಶ್ನೆ- ದೃಶ್ಯವಳಿಗಳನ್ನು ನೋಡಲಾಗಿ ಯಾವುದೇ ಮನೆ, ಅಂಗಡಿ ಕಾಣುವುದಿಲ್ಲ ಎನ್ನುವುದಕ್ಕೆ ಸಾಕ್ಷಿದಾರರು ಅದು ನನ್ನ ಮನೆ ಇರುತ್ತದೆ ಮತ್ತು ಅಂಗಡಿ ಅಲ್ಲಿಯೇ ಇರುತ್ತದೆ ಮತ್ತು ಕಂಪೌಂಡ ಇರುತ್ತದೆ ಎಂದು ನುಡಿಯುತ್ತಾರೆ.

12. ಅಲ್ಲಿ ಅಂಗಡಿಗೆ ಬೊರ್ಡ ಇರುತ್ತದೆ ಆ ಅಂಗಡಿಯ ಬೋರ್ಡ ದೃಶ್ಯವಳಿಯಲ್ಲಿ ಕಾಣುವುದಿಲ್ಲ ಎನ್ನುವುದಕ್ಕೆ ಸಾಕ್ಷಿದಾರರು ಮೇಲೆ ಅಂಗಡಿಗೆ ಸೂಗುರೇಶ್ವರ ಕಿರಾಣಿ ಶಾಪ ಎಂದು ಬೋರ್ಡ ಹಾಕಿದ್ದು ಇರುತ್ತದೆ ಎಂದು ನುಡಿಯುತ್ತಾರೆ. ಮೇಲಗಡೆ ಬೋರ್ಡ ಹಾಕಿರುತ್ತೇನೆ ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಪೊಲೀಸರು ಪೆನಡ್ರೈವ, ಸಿಡಿಯನ್ನು

ಸೃಷ್ಟಿ ಮಾಡಿರುತ್ತಾರೆ ಅದಕ್ಕೆ ಪೂರಕವಾಗಿ ಸುಳ್ಳು ಸಾಕ್ಷಿ ಹೇಳುತಿತದ್ದೇನೆ ಎಂದರೆ ಸರಿಯಲ್ಲ. ನನ್ನ ಅಂಗಡಿಯಲ್ಲಿ ಮಧ್ಯೆ ಮಾರಾಟ ಮಾಡುತ್ತಿದ್ದೇನೆ ಎಂದರೆ ಸರಿಯಲ್ಲ. ಅದಕ್ಕಾಗಿ ಅಂಜಿಕೊಂಡು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಮರುವಿಚಾರಣೆ ಇಲ್ಲ.</u>

(ನನ್ನ ಉಕ್ತ ಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಿದೆ)

ಓ.ಹೇ.ಕೆ.ಸ. ಇದೆ.

ಒಂದನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ
ನ್ಯಾಯಾಧೀಶರು, ಯಾದಗಿರಿ.